**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ**

**ಸಿ ಸಿ ಸಂಖ್ಯೆ 756/2025**

ಚಾಸಾ 1 ಫ್ರಾಸಾ 2

ಸಾಕ್ಷಿಯ ಹೆಸರು : ರಘು

ತಂದೆಯ ಹೆಸರು : ನಿಂಗಯ್ಯ

ವಯಸ್ಸು : 30 ವರ್ಷ

ಉದ್ಯೋಗ : ಅಡುಗೆ ಕೆಲಸ

ವಾಸ ಸ್ಥಳ : ತಿಮ್ಮರಾಜೀಪುರ

ದಿನಾಂಕ 04.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 2 ನನ್ನ ಸಹೋದರ. ಆರೋಪಿಗಳು ನಮ್ಮ ಕುಟುಂಬದವರು. ನನ್ನ ಮತ್ತು ಆರೋಪಿಗಳ ನಡುವೆ ಈಗ್ಗೆ 2 ವರ್ಷದ ಹಿಂದೆ ನನ್ನ ಅಜ್ಜಿ ಮೃತ ಪಟ್ಟ ಸಮಯದಲ್ಲಿ ತಮಾಷೆ ಮಾತಿಗೆ ಸಂಬಂಧಿಸಿದಂತೆ ಬಾಯಿಮಾತಿನ ಜಗಳವಾಗಿತ್ತು. ಆ ಸಮಯದಲ್ಲಿ ನಾನು ದುಃಖ ಮತ್ತು ಕೋಪದ ಭರದಲ್ಲಿ ಮೌಖಿಕ ದೂರು ನೀಡಿದ್ದೆ. ಆಗ ಪೊಲೀಸರು ನನ್ನಿಂದ ಎರಡು ದಾಖಲಾತಿಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ. ಸಾಕ್ಷಿಯು ದೂರು, ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-2 ಎಂದು, ಮಹಜರ್ ಅನ್ನು ನಿಪಿ-3 ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ರಿಂದ ನಿಪಿ-3(ಎ) ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ನಾನು ಸದರಿ ದಾಖಲಾತಿಗಳನ್ನು ಓದಲು ಆಗಿರುವುದಿಲ್ಲ. ಪೊಲಿಸರು ಸಹಾ ನನಗೆ ಓದಿ ಹೇಳಿರುವುದಿಲ್ಲ.

ನ್ಯಾಯಾಲಯದ ಸಮಕ್ಷಮ ಇರುವ ಒಂದು ದೊಣ್ಣೆ, ಒಂದು ಶರ್ಟ್ ಮತ್ತು ಬನಿಯನ್ ಅನ್ನು ನೋಡಿ ಗುರುತಿಸಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರ ಸಮಕ್ಷಮ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಮೂರು ಫೋಟೋಗಳಲ್ಲಿ ತಮ್ಮನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ- 4 ರಿಂದ ನಿಪಿ-6 ಎಂದು ಗುರುತಿಸಲಾಯಿತು. ದೂರು ದಾಖಲು ಮಾಡಿದ ನಂತರ ಪೊಲೀಸರು ಗ್ರಾಮಕ್ಕೆ ಬಂದಿದ್ದು, ಆ ಸಮಯದಲ್ಲಿ ಫೋಟೋ ತೆಗೆದುಕೊಂಡಿದ್ದರು ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ಪೊಲೀಸರೂ ಸಹಾ ತಿಳಿಸಿರುವುದಿಲ್ಲ. ಆರೋಪಿಯು ನನ್ನ ಸಂಬಂಧಿಕರಾದ ಕಾರಣ ನಮ್ಮ ನಡುವಿನ ಜಗಳನ್ನು ಅದೇ ದಿನ ರಾಜಿ ಮಾಡಿಕೊಂಡಿದ್ದೆವು.

(**ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದು ಸದರಿ ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 20.12.2024 ರಂದು ನನ್ನ ಅಜ್ಜಿ ಮೃತ ಪಟ್ಟಿದ್ದು, ಆ ದಿನ ರಾತ್ರಿ 11.00 ಗಂಟೆ ಸಮಯದಲ್ಲಿ ನಾನು ಚಾಸಾ 2ರವರ ಭುಜದ ಮೇಲೆ ಕೈ ಇಟ್ಟು ತಮಾಷೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 1ನೇ ಆರೋಪಿಯು ಈ ಸಮಯದಲ್ಲಿ ತಮಾಷೆ ಮಾಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3ನೇ ಆರೋಪಿಗಳು ಏಕಾಏಕಿ ನನ್ನ ಮೈಕೈಗೆ ಮತ್ತು ಕಿಬ್ಬೊಟ್ಟೆಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿ ದೊಣ್ಣೆಯಿಂದ ನನ್ನ ಎಡಗಣ್ಣಿನ ಹತ್ತಿರ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ–2 ರಂತೆ ದೂರು ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ.

ಆ ನಂತರ ದಿನಾಂಕಃ 23.12.2024ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದು, ಚಾಸಾ 6 ಮತ್ತು ಚಾಸಾ 7ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಜರುಗಿಸಿದ್ದು, ನ್ಯಾಯಾಲಯದ ಸಮಕ್ಷಮ ಇರುವ ದೊಣ್ಣೆ, ಬಟ್ಟೆಗಳನ್ನೂ ಸಹಾ ಹಾಜರು ಪಡಿಸಿದ್ದೆ ಎಂದರೆ ಸರಿಯಲ್ಲ. ಆ ದಿನ ಸಂಜೆ 4.30 ರಿಂದ 5.30 ಗಂಟೆ ಸಮಯದ ವರಗೆ ಮಹಜರ್ ಜರುಗಿಸಲಾಗಿತ್ತು ಎಂದರೆ ಸರಿಯಲ್ಲ. ಆ ದಿನ ಸ್ಥಳದಲ್ಲಿ ನಿಪಿ–4 ರಿಂದ ನಿಪಿ–6 ಫೋಟೋಗಳನ್ನು ತೆಗೆಯಲಾಗಿತ್ತು ಎಂದರೆ ಸರಿಯಲ್ಲ.

ಅದೇ ದಿನ ನಾನು 1ನೇ ಆರೋಪಿ ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿ ಮರು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಮರು ಹೇಳಿಕೆಯನ್ನು ಸಾಕ್ಷಿಗೆ ಸಂಪೂರ್ಣವಾಗಿ ಓದಿ ಹೇಳಲಾಗಿ ಸಾಕ್ಷಿಯು ಅದನ್ನು ಅಲ್ಲಗಳೆದಿದ್ದರಿಂದ ಮರು ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ನಾನು ಮತ್ತು ಆರೋಪಿಗಳು ಸಂಬಂಧಿಕರಾಗಿದ್ದು, ನಮ್ಮ ನಡುವಿನ ಜಗಳನ್ನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಇರುವುದಿಲ್ಲ ಎಂದು ನುಡಿಯುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ.